## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಗರ ವಲಯ, ವಿಜಾಪುರ

ದಿನಾಂಕ: 25-03-2006

ಸಂಖ್ಯೆ: ಎ4 ಹೊ.ಶಾ.ಪ್ರಾ.ಶಾ. 2004-05

ಕರ್ನಾಟಕ ಸರಕಾರ

ನಮೂನೆ - 2

(ನಿಯಮ 3 ಉಪನಿಯಮ 5 (ಬಿ))

ಸಜ್ಜನ ಗಾಣಿಗರ ಸೇವಾಸಂಘ ವಿಜಾಪುರ ಇವರ ಗವರ್ನಿಂಗ್ ಕೌನ್ಸಿಲ್ಲನ್ನು ಕರ್ನಾಟಕ ಶಿಕ್ಷಣ ಕಾಯಿದೆ 1983 (ಕರ್ನಾಟಕ ಆ್ಯಕ್ಟ - 1 - 1995 ಶೆಕ್ಷನ್ 31 ರಂತೆ ಈ ದಿನ ದಿನಾಂಕ 2004 ರಂದು ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣಿಕರಿಸಲಾಗಿದೆ)

ಉಲ್ಲೇಖ:ಸಂಬಂಧಿಸಿದ ಆಡಳಿತ ಮಂಡಳಿಯ ಮನವಿ ದಿನಾಂಕ 02-03-2006.
(2) [illegible] 25.5.2004

| | | |
|---|---|---|
| 1. | ಕ್ರಮ ಸಂಖ್ಯೆ | 75/2004-2005 [illegible] |
| 2. | ಶಾಲೆಯ ಹೆಸರು ಮತ್ತು ವಿಳಾಸ | ಶಾರದಾ ಪಬ್ಲಿಕ್ ಸ್ಕೂಲ ವಿಜಾಪುರ |
| 3. | ಅನುಮತಿ ನೀಡಿದ ತರಗತಿಗಳು | ಪ್ರಾಥಮಿಕ ಶಾಲೆ (ಕನ್ನಡ ಮಾಧ್ಯಮ 1-5) |
| 4. | ಪ್ರಾರಂಭಿಸ ಬೇಕಾದ ಶೈಕ್ಷಣಿಕ ವರ್ಷ | 2004-05 (1 ನೇ ವರ್ಗ) ಶಾಶ್ವತ ಅನುದಾನ ರಹಿತ |
| 5. | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ |
| 6. | ಶುಲ್ಕ ಪಾವತಿ ಮಾಡಿರುವದು | ರೂ. 3000-121511 ದಿ: 01-03-2004<br>ರೂ. 2000-380525 ದಿ: 01-03-2004 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ 75 ವ್ಯಾಲ್ಯಂ ಸಂಖ್ಯೆ 01 ಯಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಶರತ್ತಿ ಗೊಳಪಟ್ಟು ನೀಡಲಾಗಿದೆ.

1. ಈ ನೋಂದಾವಣಿ ನಿಯಮ 3(5) (4)ಕ್ಕೆ ಒಳಪಟ್ಟಿರುತ್ತದೆ.
2. ಗವರ್ನಿಂಗ್ ಕೌನ್ಸಿಲ್ ನಿಯಮ 4 (4) ರಲ್ಲಿ ತಿಳಿಸಿರುವ ಎಲ್ಲ ಶರತ್ತುಗಳನ್ನು ಕಟ್ಟಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ. ಆರ್ಥಿಕ ಅನುಕೂಲತೆಗಳು ಮುಂತಾದವುಗಳು ಒದಗಿಸುವ ಶರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರಕಾರದ ಪೂರ್ವಾನುಮತಿ ಇಲ್ಲದೇ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು. ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರಕಾರದ ಪೂರ್ವಾನುಮತಿ ಇಲ್ಲದೇ ಹಸ್ತಾಂತರಿಸತಕ್ಕದ್ದಲ್ಲ.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದ್ದಾಗ್ಗೆ ಹೊರಡಿಸಿದ ಎಲ್ಲ ಸರಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ ನಂ. 1/195) ಇದರಡಿಯಲ್ಲಿ ಬರುವ ಕಾಯಿದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದು.
8. ಈ ಪ್ರಾಥಮಿಕ ಶಾಲಾ ನೋಂದಣಿಯಂತೆ ಸರಕಾರಿ ಅಧಿಸೂಚನೆ ಸಂ. ಇಡಿ.175 ಪಿ.ಎಂ.ಸಿ. 95 ದಿನಾಂಕ: 07-09-98 ಮತ್ತು ದಿನಾಂಕ: 29-12-98 ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರಕಾರದಿಂದ ಯಾವುದೇ ಅನುದಾನವನ್ನು ಬಯಸುವದಿಲ್ಲವೆಂದು ರೂಪಾಯಿ 20ರ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವದು.

9 ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ನಿಯಂತ್ರಣ ನಿಯಮ 1999ರ) ನಿಯಮಗಳನ್ನು ಪಾಲಿಸತಕ್ಕದ್ದು ಅವುಗಳಿಗೆ ಬದ್ಧವಾಗಿರತಕ್ಕದ್ದು.

10 ಇಲಾಖೆ ಹಾಗೂ ಸರಕಾರ ನಿಗದಿಪಡಿಸಿದ ಪಠ್ಯ ಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು.

11 ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯಿದೆ 1983 ( ಆ್ಯಕ್ಟ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 29 ರಿತ್ಯಾ ಹಾಗೂ ಇಡಿ 131 ವಿವಿಧ 98 ಬೆಂಗಳೂರು ದಿನಾಂಕ: 04-11-99 ರಂತೆ ರೆಕಗ್ನೀಶನ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

12 ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಚೇರಮನ್ / ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

13 ಅನುಮತಿ ಹಾಗೂ ಇಲಾಖೆ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

14 ಪ್ರತಿ ವರ್ಷವು ವಿಧ್ಯಾರ್ಥಿಗಳ ವೈದ್ಯಕಿಯ ಪರಿಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

15 ಕರ್ನಾಟಕ ಶಿಕ್ಷಣ ಮಸುದೆ ನಿಯಮಗಳ ಪ್ರಕಾರ ಶಾಲೆ ಬೇಕಾದ ಪಿಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿ ಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವದು.

16 ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳೆಂದು ಪಾಲಿಸತಕ್ಕದ್ದು.

17 ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಶರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವದು.

18 ಶಿಕ್ಷಕರ ಸೇವಾ ಪುಸ್ತಕ ಕಡ್ಡಾಯವಾಗಿ ತೆರೆಯುವದು.

19 ಸದರಿ ಸ್ಥಳದಲ್ಲಿ ಅನಮತಿ ನೀಡಿದ ವರ್ಗಗಳನ್ನು ಹೊರತು ಪಡಿಸಿ ಬೇರೆ ಯಾವುದೇ ವರ್ಗಗಳನ್ನಾಗಲಿ ಅಥವಾ ಸಂಸ್ಥೆಗಳನ್ನಾಗಲಿ ನಡೆಸಬಾರದು.

20 ಸದರಿ ಶಾಲೆಯ ಹೆಸರನ್ನು ಆಡಳಿತ ಮಂಡಳಿಯ ಮನವಿಯ ಮೇರೆಗೆ ಬದಲಾವಣೆ ಮಾಡಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ನಗರ ವಲಯ, ವಿಜಾಪುರ.

1) ಅಧ್ಯಕ್ಷರು ಸಜ್ಜನ ಗಾಣಿಗರ ಸೇವಾ ಸಂಘ ವಿಜಾಪುರ.
2) ನಿರ್ದೇಶಕರು, (ಪ್ರಾ.ಶಿ.) ಆಯುಕ್ತರ ಕಛೇರಿ ಸಾ.ಶಿ. ಇಲಾಖೆ ಬೆಂಗಳೂರು.
3) ಉಪ ನಿರ್ದೇಶಕರು ಸಾ.ಶಿ. ಇಲಾಖೆ ವಿಜಾಪುರ.